ಇ) ಇತ್ತೀಚಿನ ವರ್ಷಗಳಲ್ಲಿ ಬಂದಿಗಳಿಗೆ ಸರಿಯಾಗಿ ಆಹಾರ ನೀಡುತ್ತಿಲ್ಲ ಎನ್ನುವುದು ನಿಜವೇ ?

ಈ) ಹಾಗಿದ್ದಲ್ಲಿ ಬಂದಿಗಳಿಗೆ ಸರಿಯಾಗಿ ಆಹಾರ ನೀಡುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಶ್ರೀ ಡಿ.ಕೆ. / ಶಿವಕುಮಾರ್ (ಬಂದೀಖಾನೆ ಮತ್ತು ಗೃಹರಕ್ಷಕ ದಳ ರಾಜ್ಯ ಸಚಿವರು)

ಅ) ರಾಜ್ಯದ ಎಲ್ಲಾ ಕೇಂದ್ರ ಕಾರಾಗೃಹಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಂದಿಗಳಾಗಿದ್ದವರ ಸಂಖ್ಯೆ ಈ ಕೆಳಕಂಡಂತಿದೆ.

31-12-89 ರಂದು	2772
31-12-90 ರಂದು	2912
31-12-91 ರಂದು	3504

ಆ) ವರ್ಷ ವರ್ಷಕ್ಕೆ ಖೈದಿಗಳ ಸಂಖ್ಯೆ ಹೆಚ್ಚುತ್ತಿದೆ.

ಇ) ನಿಜವಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಅಭಿವೃದ್ಧಿ ಅನುದಾನ

280-ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ (1988-89, 89-90, 90-91 ಈವರೆಗೆ) ಬೆಂಗಳೂರು ಗ್ರಾಮಾಂತರ ಜಿಲ್ಲೆಗ ಅಭಿವೃದ್ಧಿ ಅನುದಾನ ಬಿಡುಗಡೆ ಬಗ್ಗೆ (ತಾಲ್ಲೂಕು ಹಾಗೂ ವರ್ಷದ ವಿವರದೊಂದಿಗೆ)

ಆ) ಚನ್ನಪಟ್ಟಣ ಪುರಸಭೆಗೆ ಕಳೆದ ವರ್ಷ, ಅಭಿವೃದ್ಧಿ ಅನುದಾನ ಮಂಜೂರು ಮಾಡದೇ ಇದ್ದುದು ನಿಜವೇ ?

ಇ) ಹಾಗಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ಅಭಿವೃದ್ಧಿ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡಲಾಗುತ್ತಿಲ್ಲ.

ಆ) ಚನ್ನಪಟ್ಟಣ ಪುರಸಭೆಗೆ ಕಳೆದ ಸಾಲಿನಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ವಿವೇಚನಾತ್ಮಕ ಅನುದಾನದಲ್ಲಿ 3 ಲಕ್ಷ ರೂ.ಗಳ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಮಾರಾಟ ತೆರಿಗೆಯಿಂದ ವಸೂಲಾದ ಮೊತ್ತದ ಹಣ

281- ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1988-89ರ ಸಾಲಿನಿಂದ 1989-90, 1990-91ರ ಸಾಲಿನಲ್ಲಿ ಇಲ್ಲಿಯವರೆಗೆ ವಸೂಲಾದ ಒಟ್ಟಾರೆ ಮಾರಾಟ ತೆರಿಗೆ ಮೊತ್ತವೆಷ್ಟು ?

ಅ) ಅತಿ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಪಾವತಿಯನ್ನು ತಪ್ಪಿಸುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ದನ್ನು ತಡೆಹಿಡಿಯಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಈ ಸಾಲುಗಳಲ್ಲಿ ವಸೂಲಿ ಮಾಡಲಾದ ಒಟ್ಟು ಮಾರಾಟ ತೆರಿಗೆ ಮೊತ್ತ ಈ ಕೆಳಕಾಣಿಸಿದಂತಿದೆ.

ವರ್ಷ	ವಸೂಲಿ (ರೂ. ಕೋಟಿಗಳಲ್ಲಿ)
1988-89	987.24
1989-90	1,081.27
1990-91	1,322.94
1991-92	1,230.17
(ಜನವರಿ 1992ರ ತನಕ)	

ಅ) ಹೌದು. ತೆರಿಗೆ ಕಳ್ಳತನವನ್ನು ತಪ್ಪಿಸಲು ಒಂದು ಸುಸಜ್ಜಿತವಾದ ಗುಪ್ತದಳ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಾರ್ಯಾಚರಣೆಯಲ್ಲಿದ್ದು ಇದು ವಾಣಿಜ್ಯ ತೆರಿಗೆ ಆಯುಕ್ತರು ಮತ್ತು ಹೆಚ್ಚುವರಿ ವಾಣಿಜ್ಯ ತೆರಿಗೆ ಆಯುಕ್ತರು ಇವರುಗಳ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ಮಾಡುತ್ತಲಿವೆ. ಇಂತಹ ಗುಪ್ತದಳ ಕಛೇರಿಗಳು ಬೆಂಗಳೂರು, ಬೆಳಗಾಂ, ಗುಲ್ಬರ್ಗಾ ಮತ್ತು ಮಂಗಳೂರುಗಳಲ್ಲಿ ಸಂಬಂಧಿಸಿದ ವಾಣಿಜ್ಯ ತೆರಿಗೆ ಉಪ ಆಯುಕ್ತರ ಅಧೀನದಲ್ಲಿ ಕಾರ್ಯಾಚರಣೆ ಮಾಡುತ್ತಿವೆ. ಇವು ಕಳ್ಳತನದಿಂದ ಮಾಲು ಸಾಗಾಣಿಕೆ ಮಾಡುವ ಪ್ರಕರಣಗಳನ್ನು ಪತ್ತೆ ಹಚ್ಚಲು ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಯ ಪ್ರಮುಖ ಸ್ಥಳಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ಇಂಥಹ ಪ್ರಕರಣಗಳನ್ನು ತನಿಖೆ ಮಾಡಿ ತಪ್ಪಿಸಬಹುದಾದ ತೆರಿಗೆಯನ್ನು ತಡೆಯುತ್ತದೆ. ಇದರ ಜೊತೆಗೆ ಫಲಪ್ರದವಾದ ಫಲಿತಾಂಶಕ್ಕಾಗಿ ಸಂಚಾರಿ ತನಿಖಾ ತಂಡಗಳು, ಸಂಚಾರಿ ಚೆಕ್‌ಪೋಸ್ಟ್ ಸಹಾ ಅವಶ್ಯವಿದ್ದ ಕಡೆಗಳಲ್ಲಿ ಜಾರಿಯಲ್ಲಿದ್ದು ಇವು ದಿನವಿಡೀ ಸರಕು ಸಾಗಣೆ ವಾಹನಗಳ ಮೇಲೆ ಜಾಗ್ರತೆ ವಹಿಸುತ್ತವೆ. ಹಾಗೂ ಜಾರಿ ಹೋಗಬಹುದಾದ ತೆರಿಗೆಯನ್ನು ತಪ್ಪಿಸುತ್ತವೆ. ಇದೂ ಅಲ್ಲದೆ ಈ ಗುಪ್ತ ದಳ ತಂಡಗಳು ಋತುಮಾನ ಸರಕುಗಳ ರವಾನೆಯಲ್ಲೂ ಗಮನವಹಿಸಿ ಅಂತಹ ಸರಕುಗಳನ್ನು ಸಾಗಿಸುವ ವಾಹನಗಳ ಸುಬರ್ದಿನಲ್ಲಿನ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಮಾಡಿ ತೆರಿಗೆ ಕಳ್ಳತನವನ್ನು ತಡೆಯುತ್ತವೆ.

ಮಲೆನಾಡು ಅಭಿವೃದ್ಧಿ ಮಂಡಲ ವ್ಯಾಪ್ತಿಗೆ ಚಾಮರಾಜನಗರ ತಾಲ್ಲೂಕು.

302-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಚಾಮರಾಜನಗರ ತಾಲ್ಲೂಕನ್ನು ಸೇರಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು)

ಅ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.